**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 59/2023**

| | | |
|---|---|---|
| ಸಾಕ್ಷಿದಾರರ ಹೆಸರು | - ನಾಗರಾಜ | ಪಿಡಬ್ಲ್ಯೂ- 06 |
| ತಂದೆಯ ಹೆಸರು | - ನಂಜುಂಡಪ್ಪ | ಸಿಡಬ್ಲ್ಯೂ -08 |
| ವಯಸ್ಸು | - 30 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ನಂದಿ ಗ್ರಾಮ | |

ದಿನಾಂಕಃ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಫ್ರಾಸಾ.1 ನನ್ನ ಚಿಕ್ಕಪ್ಪ. ಫ್ರಾಸಾ.2 ನನ್ನ ಅಜ್ಜ. ಫ್ರಾಸಾ.3 ರಿಂದ 5 ಗೊತ್ತು.

2. ಆರೋಪಿಯಿಂದ ಫ್ರಾಸಾ.2 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 08-01-2023 ರಂದು ಸಂಜೆ 6 ಗಂಟೆಗೆ ಫ್ರಾಸಾ.1 ರವರು ಕೆಲಸ ಮುಗಿಸಿಕೊಂಡು ಅವರ ಬೈಕಿನಲ್ಲಿ ಬಂದಿದ್ದು ಆಗ ಫ್ರಾಸಾ.5 ರವರು ಅಲ್ಲಿಗೆ ಬಂದು ಫ್ರಾಸಾ.1 ರವರನ್ನು ಕುರಿತು, ನಿಮ್ಮ ಅಪ್ಪ ಹನುಮಂತಪ್ಪರವರ ಜಮೀನಿನಲ್ಲಿರುವ ಮಿಟಲಿ ಮರದಡಿ ಬಿದ್ದಿದ್ದು, ನೋವು ನೋವು ಎಂದು ನರಳುತ್ತಿದ್ದಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಫ್ರಾಸಾ.1 ರವರು ಕೂಡಲೇ ಅವರ ಬೈಕಿನಲ್ಲಿ ನನ್ನನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಫ್ರಾಸಾ.2 ರವರು ಬಿದ್ದಿದ್ದು ನೋವು, ನೋವು ಎಂದು ನರಳುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾವು ಅವರನ್ನು ಉಪಚರಿಸಿ ನಿಮಗೆ ಹೊಡೆದವರು ಯಾರು ಎಂದು ವಿಚಾರಿಸಿದಾಗ, ದಿಃ 08-01-2023 ರಂದು ಬೆಳಿಗ್ಗೆ ಎಮ್ಮೆ ಮೇಯಿಸುವ ಸರದಿ ಪೂಜಾರಿ ಚಂದ್ರಪ್ಪರವರಿಗೆ ಇದ್ದು ಅವರ ಪರವಾಗಿ ನಾನು ಎಮ್ಮೆ ಮೇಯಿಸಲು ಸಿದ್ದರ ಓಣಿ ಹತ್ತಿರ ಹೋದಾಗ ನನಗೆ ಬಾಯಾರಿಕೆ ಆಗಿದ್ದರಿಂದ ಎಮ್ಮೆಗಳನ್ನು ಬಿಟ್ಟು ಮಧ್ಯಾಹ್ನ 12 ಗಂಟೆ ಸುಮಾರಿಗೆ ಮಿಟಲಿ ಮರದಡಿಯಲ್ಲಿ ನೀರು ಕುಡಿಯುತ್ತಿದ್ದಾಗ 1 ನೇ ಆರೋಪಿಯಾದ ಅರುಣಕುಮಾರ ಅಲ್ಲಿಗೆ ಬಂದು ಏಕಾಏಕಿ ದೊಣ್ಣೆಯಿಂದ ನನ್ನ ಎಡಗಾಲು, ಎಡಗೈ ಮತ್ತು ಸೊಂಟಕ್ಕೆ ಬಲವಾಗಿ ಹೊಡೆದು ಅವಾಚ್ಯ ಶಬ್ಧಗಳಿಂದ ಬೈದಿದ್ದಾಗಿ, ಆಗ ನಾನು ಆರೋಪಿಯನ್ನು ಕುರಿತು ಯಾಕಪ್ಪ ಈ ರೀತಿ ಹೊಡೆಯುತ್ತೀರಾ ಎಂದು ಕೇಳಿದಾಗ, ಹೊಲೆಯ ಮಾದಿಗ

ಸೂಳೆ ಮಗನೇ, ನಿನ್ನ ತಾಯಿನಾಡ ನಿನಗೆ ಜ್ಞಾನ ಇಲ್ಲವೇನೋ, ನಿನ್ನನ್ನು ಕೊಲೆ ಮಾಡುತ್ತೇನೆ ಮತ್ತು ನಿನ್ನ ಕುಟುಂಬದವರನ್ನು ಯಾರನ್ನು ಕೂಡ ಉಳಿಸುವುದಿಲ್ಲ ಎಂದು ಆರೋಪಿ ಹೇಳಿ, ದೊಣ್ಣೆಯನ್ನು ಮರದಡಿ ಬಿಸಾಡಿ ಹೋಗಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಗಲಾಟೆಯಾಗುವಾಗ ಫ್ರಾಸಾ.3 ಮತ್ತು 4 ರವರು ಸ್ಥಳದಲ್ಲಿ ಇದ್ದುದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ.

4. ನಂತರ ನಾನು ಮತ್ತು ಫ್ರಾಸಾ.1 ರವರು ಫ್ರಾಸಾ.2 ರವರನ್ನು ಬೈಕಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಂತರ ಮಾರನೆ ದಿನ ಫ್ರಾಸಾ.2 ರವರು ಎದ್ದಾಗ ತುಂಬಾ ನೋವಾಗುತ್ತಿದೆ ಎಂದು ತಿಳಿಸಿದಾಗ ಅವರನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದೆವು ಎಂದರೆ ಸರಿಯಲ್ಲ. ನಂತರ ಆ ಬಗ್ಗೆ ಫ್ರಾಸಾ.1 ರವರು ಲಿಂಗದಹಳ್ಳಿ ಪೊಲೀಸರಿಗೆ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ನೀಡಿದರು ಎಂದರೆ ಸರಿಯಲ್ಲ.

5. ದಿಃ 13-01-2023 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.10 ಎಂದು ಗುರುತಿಸಲಾಯಿತು.

6. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ

ನಿಪಿ.10 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ